# ವಿಚಾರ ಲಹರಿ

'ನಿನ್ನನ್ನು ನೀನು ತಿಳಿ' ಎಂಬ ಒಂದು ಮಾತನ್ನು ನಾವು ಲಾಗಾಯ್ತಿನಿಂದ ಕೇಳುತ್ತ ಬಂದಿದ್ದೇವೆ. ಪೂರ್ವ ದೇಶದ ಸಂಸ್ಕೃತಿಗಳಲ್ಲಿ ಈ ನುಡಿಗಟ್ಟು ಅನನ್ಯವಾದ ಒಂದು ಗುರುತಾಗಿ ಸೇರಿ ಹೋಗಿದೆ. ಪಶ್ಚಿಮದ ಸಂಸ್ಕೃತಿಗೂ ಆಧಾರ ಪುರುಷ ಎನ್ನಬಹುದಾದ ಸಾಕ್ರಟೀಸನ ಮಾತುಗಳಲ್ಲಿ 'ನಿನ್ನನ್ನು ನೀನು ತಿಳಿ' ಎನ್ನುವುದು ಮುಖ್ಯ ಪ್ರಮೇಯವೇ ಆಗಿದೆ. ವಿಚಾರ ಪ್ರಧಾನವಾದ ಸಂವಾದಗಳನ್ನು ನಡೆಸಿ ಹೊಸತೊಂದು ಉನ್ಮೇಷವನ್ನು ತರುಣ ಮನಸ್ಸುಗಳಲ್ಲಿ ಉಂಟು ಮಾಡುತ್ತಿದ್ದ ಸಾಕ್ರಟೀಸನನ್ನು ಯಾರೋ ಕೇಳಿದರಂತೆ. ನಿನಗೆ ಇಂಥ ವೈಚಾರಿಕತೆ ಎಲ್ಲಿಂದ ಬಂತು ಎಂದು. ಅದಕ್ಕೆ ಸಾಕ್ರಟೀಸ್ ಉತ್ತರಿಸಿದ್ದು ಹೀಗೆ: ಡೆಲ್ಫಿಯ ದೇವವಾಣಿ ನನಗೆ ಕೇಳಿಸಿತು. ಅದು 'ನಿನ್ನನ್ನು ನೀನು ತಿಳಿ' ಎಂದು ಹೇಳಿತು. ಈ ಒಂದು ಮಾತಿನಿಂದ, ಬದುಕಿನಲ್ಲಿ ವಿಚಾರ ಮಾಡ ಬೇಕಾದ ಅಗತ್ಯ ಮತ್ತು ಅದರ ಮಹತ್ವ ನನಗೆ ಮನವರಿಕೆಯಾಯಿತು.

' ನಿನ್ನನ್ನು ನೀನು ತಿಳಿ' ಎಂದಾಗ ಈ ತಿಳುವಳಿಕೆಯನ್ನು ಪಡೆಯುವ ದಾರಿ ಯಾವುದು? ತನಗಿಂತ ಭಿನ್ನವಾದ ಇನ್ನೊಂದು ವಸ್ತುವಿನ ಕುರಿತಾದ ತಿಳುವಳಿಕೆಯನ್ನು ಮಾಡಿಕೊಳ್ಳುವ ಬಗೆ ನಮಗೆ ಗೊತ್ತಿರಬಹುದು. ಈ ತಿಳುವಳಿಕೆಯು ಮಾಹಿತಿ ಪ್ರಧಾನವಾದದ್ದು. ಅನುಭವ ಪ್ರಧಾನವಾದುದಲ್ಲ. ಆದರೆ ನಮ್ಮನ್ನೇ ಕುರಿತಾದ ನಮ್ಮ ತಿಳುವಳಿಕೆಯು ನಮಗೆ ಬರಿಯ ಮಾಹಿತಿಯಲ್ಲವಲ್ಲವೆ? ಇದು ನಮ್ಮ ಅನುಭವವೇ ಆಗಿರಬೇಕಲ್ಲವೆ? ಅಂದರೆ ಇನ್ನೊಂದನ್ನು ತಿಳಿದಂತೆ ನಮ್ಮನ್ನು ನಾವು ತಿಳಿಯಲಾರೆವು. ನಮ್ಮನ್ನೇ ನಾವು ತಿಳಿಯುವ ಪರಿ ಬೇರೆ ಇರಬಹುದು.

ನಮ್ಮ ಪಂಚೇಂದ್ರಿಯಗಳಿಂದ ನಾವು ಹೊರಲೋಕವನ್ನು ನೋಡುವೆವು. ನಾವು ನೋಡುವ ಲೋಕ ನಮ್ಮಿಂದ ಹೊರತಾಗಿ ಬೇರೆಯಾಗಿ ಇದೆ, ಅದುದರಿಂದಲೇ ಅದನ್ನು ನೋಡಲು ನಮಗೆ ಅನುಕೂಲವಾಗಿದೆ ಎಂದು ಭಾವಿಸುವೆವು. ಹೀಗೆ ಅನ್ನಿಸುವುದೇನೋ ನಿಜ. ಆದರೆ ನಾವು ನೋಡಿದ್ದು, ಕೇಳಿದ್ದು, ಮುಟ್ಟಿದ್ದು, ಮೂಸಿದ್ದು, ಸವಿದದ್ದು– ಎಲ್ಲವೂ ನಮ್ಮೊಳಗೆ ಸೇರಿ ಹೋಗುವುದು. ನಮ್ಮ ಜೀವನದ ಭಾಗವೇ ಆಗಿ ಬಿಡುವುದು! ನಮ್ಮ ನೆನಪುಗಳು ನಮ್ಮ ವ್ಯಕ್ತಿತ್ವದ ಅವಿಭಾಜ್ಯ ಅಂಗಗಳಲ್ಲವೆ? ನೆನಪುಗಳು ನಾವು ಪಂಚೇಂದ್ರಿಯಗಳಿಂದ ಪಡೆದ ಅನುಭವಗಳೇ ಅಲ್ಲವೆ? ಈ ಅನುಭವಗಳೆಲ್ಲದರ ಒಟ್ಟು ಮೊತ್ತವೇ 'ನಾವು' ಅಲ್ಲವೆ? ಅನುಭವಗಳೆಲ್ಲವೂ ನಮ್ಮೊಳಗೆ ದಾಖಲಾಗಿವೆ ಮತ್ತು ಈ ದಾಖಲೆಗಳೇ 'ನಾವು'. ಒಂದು ದೊಡ್ಡ ಮರದ ವಯಸ್ಸನ್ನು ಹೇಗೆ ಕಂಡು ಹಿಡಿಯುತ್ತಾರೆನ್ನುವುದು ಕುತೂಹಲದ ವಿಷಯ. ಆ ಮರದ ಅಡ್ಡಕೊಯ್ತದ ದಿಮ್ಮಿಗಳಲ್ಲಿರುವ ಚಕ್ರಾಕಾರದ ಗುರುತುಗಳ ಮೂಲಕ ಮರದ ಆಯುಷ್ಯವನ್ನು ಅಳೆಯುವರು. ಅಂದರೆ ಮರದ ಬದುಕು, ಅದು ಅನುಭವಿಸಿದ ಸ್ಥಿತ್ಯಂತರಗಳೆಲ್ಲವೂ ಅದರ ಮೈಯಲ್ಲಿ ದಾಖಲಾಗಿವೆ. 'ಮೈ' ಎಂದರೆ ಅನುಭವದ ದಾಖಲೆ. ಮನುಷ್ಯ ಜೀವಿಯಲ್ಲಿ ಮೈಯು ಅವನ ಮನಸ್ಸಿಗೂ ವಿಸ್ತರಿಸಿರುವುದರಿಂದ, ಮನುಷ್ಯನು ಮನೋ – ದೇಹಿಯಾಗಿರುವುದರಿಂದ, ಮನುಷ್ಯನ ಮೈ–ಮನಗಳಲ್ಲಿ ಅವನು ಅನುಭವಿಸಿದ್ದೆಲ್ಲವೂ ಚಿರ ಮುದ್ರಿತವಾಗಿರುತ್ತವೆ. ಅಂದರೆ, ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಲೋಕವೇ ನಮ್ಮಲ್ಲಿ ಅಡಗಿದೆ ಎಂದಂತಾಯಿತು. ದೇವರಲ್ಲಿ ಲೋಕ ಲೋಗಳು ಅಡಗಿವೆ ಎಂದು ಭಕ್ತರು ಹೇಳುವುದುಂಟು. ಏನು! ಮನುಷ್ಯರ ಅನುಭವವನ್ನೇ ದೇವರ ಅನುಭವವೆಂದು ಪ್ರಕಾರಾಂತರವಾಗಿ ಹೇಳುವುದೆ? ಲೋಕ, ನಮ್ಮ ಹೊರಗಡೆ ಇರುವಂತೆ ತೋರಿದರೂ ಅದು ನಮ್ಮೊಳಗಡೆ ಇದೆ ಎನ್ನುವುದೇ ನಿಜ. ನಮಗೆ ಕಣ್ಣು ಕೊಟ್ಟಿರುವುದು ಪ್ರಕೃತಿಯಲ್ಲವೆ? ನಮ್ಮ ಕಣ್ಣಿಗೆ, ದೃಶ್ಯವಾಗಿ ಕಾಣಿಸಿಕೊಂಡಿರುವುದೂ ಅದೇ ಪ್ರಕೃತಿಯಲ್ಲವೆ? ಅಂದಾಗ ನಮ್ಮ ಕಣ್ಣಿನ ಮೂಲಕ, ಪ್ರಕೃತಿ ತನ್ನನ್ನೇ ತಾನು ನೋಡಿಕೊಳ್ಳುತ್ತಿದೆ ಎನ್ನಬಹುದಲ್ಲವೆ! ತನ್ನನ್ನು ತಾನು ನೋಡಿ ಕೊಳ್ಳುವಂತೆಯೇ ಪ್ರಕೃತಿಯ ರಚನೆ ಇದೆ ಎನ್ನುವ ತಿಳುವಳಿಕೆಯೇ ನಿಜವಲ್ಲವೆ!

ದಾಸರ ಕೀರ್ತನೆಯೊಂದರಲ್ಲಿ 'ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ' ಎಂಬೊಂದು ಸೂಕ್ತಿ ಇದೆ. ಪ್ರಸಿದ್ಧವಾದ್ದು. ನೋಡುವ ಕಣ್ಣಾಗಿ ಮತ್ತು ಈ ನೋಟಕ್ಕೆ ಕಾಣಿಸುವ ದೃಶ್ಯವಾಗಿ, ತಾನೇ ಎರಡು ರೂಪಗಳಲ್ಲಿಯೂ ಕ್ರೀಡಿಸುವ ಪ್ರಕೃತಿಯ ಆಟವನ್ನು ತಿಳಿದಾಗ ಹುಟ್ಟಿಕೊಂಡ ಹೋಲಿಕೆ ಇದು. ಈ ಸಾಲಿನಲ್ಲಿ, 'ವರವ ಪಡೆದವರಂತೆ' ಎಂಬ ಮಾತಿದೆ. ಪಡೆದವರಂತೆ ಎಂಬುದನ್ನು ಸೂಕ್ಷ್ಮಜ್ಞತೆಯಿಂದ ಓದಿಕೊಳ್ಳಬೇಕು ಅನಿಸುತ್ತದೆ. ವರವ ಪಡೆದಿಲ್ಲ, ಪಡೆಯ ಬೇಕಿಲ್ಲ, ವರ ಪಡೆಯುವುದು ಬೇರೆಯೇ ಒಂದು ಕ್ರಿಯೆಯಲ್ಲ ವರ ಪಡೆದುಕೊಂಡೇ ಇದ್ದೇವೆ– ಇದುವರೆಗೆ ಅರಿವಿಗೆ ಬರದಂತಿದ್ದ ಈ ವಿಷಯ ಇಂದು ಅರಿವಿಗೆ ಬಂದ ಹೊತ್ತಿನಲ್ಲಿ 'ಪಡೆದವರಂತೆ' ಎಂದು ಹೇಳುವುದೇ ಸರಿಯಾದ ಮಾತು. ಜೊತೆಗೆ 'ಚೆಲ್ಲಿ' ಎನ್ನುವ ಕ್ರಿಯಾಪದ. ಪ್ರಜ್ಞಾಪೂರ್ವಕ ಕ್ರಿಯೆಯನ್ನು ಸೂಚಿಸುವುದಕ್ಕಿಂತ ತಾನಾಗಿ ಸಂಭವಿಸುವ ಒಂದು ಬಗೆಯ ಅಪ್ರಜ್ಞಾ ಪೂರ್ವಕ ವಿದ್ಯಮಾನವನ್ನು 'ಚೆಲ್ಲಿ' ಎಂಬುದು ಸೂಚಿಸುತ್ತದೆ. 'ಪಡೆದವರಂತೆ' ಎಂದಂತೆ 'ಚೆಲ್ಲಿದಂತೆ' ಎಂದೂ ಓದಿ ಕೊಳ್ಳುವುದಕ್ಕೆ ಇಷ್ಟವಾಗುತ್ತದೆ. ತನ್ನನ್ನು ತಾನು ತಿಳಿಯುವುದು ಎನ್ನುವುದು 'ತನ್ನನ್ನು ತಾನು ತಿಳಿದಂತೆ' ಎನ್ನುವುದೇ ಹೆಚ್ಚು ನಿಜವಲ್ಲವೆ!

■ ತೋಷ

## ಮಾತೇ ಮುತ್ತು

★ ಪ್ರಕೃತಿಯ ಗುಣಗಳನ್ನು ಕಲಿತುಕೊಳ್ಳಿ. ತಾಳ್ಮೆಯೇ ಆಕೆಯ ರಹಸ್ಯ.

-ರಾಲ್ಫ್ ಎಮರ್ಸನ್

★ ಎಲ್ಲ ತತ್ವಜ್ಞಾನಗಳೂ ಜೀವನದ ಒಂದು ಹಂತದ ತತ್ವಜ್ಞಾನಗಳಷ್ಟೇ.

-ಫ್ರೆಡ್ರಿಕ್ ನೀಟ್ಶೆ

★ ಯಾರ ಮನಸ್ಸು ಸ್ವತಂತ್ರವಾಗಿ ಇರುವುದಿಲ್ಲವೋ, ಅವನ ಕೈಗಳಿಗೆ ಬೇಡಿ ತೊಡಿಸದಿದ್ದರೂ ಕೂಡಾ ಅವನು ಗುಲಾಮನಂತೆಯೇ. ಅವನು ಮುಕ್ತ ಮನುಷ್ಯನಲ್ಲ.

-ಬಾಬಾಸಾಹೇಬ ಅಂಬೇಡ್ಕರ್

★ ಎಲ್ಲರೂ ತಪ್ಪುಗಳನ್ನು ಮಾಡುತ್ತಾರೆ. ಆದರೆ ಬುದ್ಧಿವಂತರು ಮಾತ್ರ ಅವುಗಳಿಂದ ಪಾಠ ಕಲಿಯುತ್ತಾರೆ.

-ವಿನ್‌ಸ್ಟನ್ ಚರ್ಚಿಲ್

★ ಎಲ್ಲರನ್ನೂ ಪ್ರೀತಿಸಿ, ಆದರೆ ಕೆಲವರನ್ನು ಮಾತ್ರ ನಂಬಿ.

-ವಿಲಿಯಂ ಷೇಕ್ಸ್‌ಪಿಯರ್

★ ಬಾ ಇಲ್ಲಿ ಸಂಭವಿಸು, ಇಂದೆನ್ನ ಹೃದಯದಲಿ, ನಿತ್ಯವೂ ಅವತರಿಪ ಸತ್ಯಾವತಾರ.

-ಕುವೆಂಪು

★ ಪ್ರೀತಿ ಅದ್ಭುತ ಮತ್ತು ಅತ್ಯಗತ್ಯ ಎಂದು ಎಲ್ಲರೂ ಹೇಳುತ್ತಾರೆ. ಆದರೆ ಪ್ರೀತಿ ಎಂದರೆ ನಿಜಕ್ಕೂ ಏನು ಎನ್ನುವ ಬಗ್ಗೆ ಯಾರಲ್ಲೂ ಒಮ್ಮತಾಭಿಪ್ರಾಯ ಇಲ್ಲ.

-ಡಯೆನ್ ಅಕರ್ಮನ್

★ ಇಳಿವಯಸ್ಸಿನಲ್ಲಿ ಶಿಕ್ಷಣ ಪಡೆಯುವುದು ಅತ್ಯುತ್ತಮ ಕೆಲಸ.

-ಅರಿಸ್ಟಾಟಲ್

★ ಪುರುಷರು ಮಹಿಳೆಯ ಮೊದಲ ಪ್ರೀತಿಯಾಗಲು ಬಯಸುತ್ತಾರೆ. ಮಹಿಳೆಯರು ಪುರುಷರ ಕೊನೆಯ ಪ್ರಣಯವಾಗಲು ಬಯಸುತ್ತಾರೆ.

-ಆಸ್ಕರ್ ವೈಲ್ಡ್

★ ತಾನು ಪಡೆದದ್ದಕ್ಕಿಂತ ಹೆಚ್ಚಿನದನ್ನು ಈ ಜಗತ್ತಿಗೆ ಕೊಡುವವನೇ ಸಭ್ಯ ಮನುಷ್ಯ.

-ಜಾರ್ಜ್ ಬರ್ನಾರ್ಡ್ ಷಾ

★ ಕ್ರಿಯೆಯೇ ಬುದ್ಧಿವಂತಿಕೆಯ ನಿಜವಾದ ಮಾನದಂಡ.

-ನೆಪೋಲಿಯನ್ ಹಿಲ್

★ ಪ್ರಾಯ ಪರಿಶೀಲನೆ ನಡೆಸುತ್ತದೆ. ಯೌವನ ಸಾಹಸಕ್ಕೆ ಧುಮುಕುತ್ತದೆ.

-ರಬೀಂದ್ರನಾಥ ಠಾಗೋರ್